| District :Mysore | State : Karnataka |
|---|---|

Department of BCM

## ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.

## 2006-07 ನೇ ಸಾಲಿಗೆ ಒದಗಿಸಿರುವ ಆಯವ್ಯಯ ಮತ್ತು 15 ಫೆಬ್ರವರಿ 2007 ರ ಮಾಹೆಯ ಅಂತ್ಯಕ್ಕೆ ಬಿಡುಗಡೆಯಾದ ಹಾಗೂ ಖರ್ಚು ಭರಿಸಿರುವ ಅನುದಾನದ ವಿವರಗಳು

### ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು (ಯೋಜನೆ)

### 1. 2225-03-277-1-02 ಖಾಸಗಿ ವಿದ್ಯಾರ್ಥಿ ನಿಲಯಗಳಿಗೆ ಸಹಾಯಧನ :- ರೂ. 5.00 ಲಕ್ಷ

ಈ ಕಾರ್ಯಕ್ರಮದಡಿ 3 ಖಾಸಗಿ ವಿದ್ಯಾರ್ಥಿನಿಲಯಗಳು ಇರುತ್ತವೆ. ಈ ಮೂರು ವಿದ್ಯಾರ್ಥಿ ನಿಲಯಗಳ ಮಂಜೂರಾತಿ ಸಂಖ್ಯೆ 150 ಇರುತ್ತದೆ.ಈ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 350-00 ರಂತೆ ಭೋಜನಾ ವೆಚ್ಚಕ್ಕಾಗಿ ಸಹಯಾಧನ ಮಂಜೂರು ಮಾಡಲು 2006-07 ನೇ ಸಾಲಿಗೆ ರೂ. 5.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಫೆಬ್ರವರಿ 15 ರ ಅಂತ್ಯಕ್ಕೆ ರೂ. 5.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು 125 ವಿದ್ಯಾರ್ಥಿಗಳಿಗೆ ಭೋಜನಾ ವೆಚ್ಚಕ್ಕಾಗಿ ರೂ. 4.015 ಲಕ್ಷಗಳ ಅನುದಾನವನ್ನು ಖರ್ಚು ಭರಿಸಲಾಗಿದೆ

### 2. 2225-03-277-1-03 ಆಶ್ರಮ ಶಾಲೆಗಳು :- ರೂ. 0.55 ಲಕ್ಷ

ನಂಜನಗೂಡು ತಾಲ್ಲೂಕಿನ ಹರಗನಪುರ ಗ್ರಾಮದಲ್ಲಿ ಒಂದು ಆಶ್ರಮ ಶಾಲೆ ನಡೆಯುತ್ತಿದೆ. ಇದರ ಸಂಖ್ಯಾಬಲ 25 ಆಗಿರುತ್ತದೆ. ಈ ಆಶ್ರಮ ಶಾಲೆಯ ಶಿಕ್ಷಕರು, ಅಡಿಗೆ ಸಹಾಯಕರ ವೇತನ & 25 ವಿದ್ಯಾರ್ಥಿಗಳ ನಿರ್ವಹಣೆ ಬಾಬ್ತು ಯೋಜನೇತರಕ್ಕೆ ವರ್ಗಾವಣೆಯಾಗಿರುತ್ತದೆ. ಒಂದು ಅಡಿಗೆಯವರ ಹುದ್ದೆ ಯೋಜನೆಯಲ್ಲಿ ಮುಂದುವರೆಯುತ್ತಿದೆ. ವೇತನ ಪಾವತಿಸಲು ರೂ. 0.55 ಲಕ್ಷಗಳ ಅನುದಾನ ವನ್ನು ಒದಗಿಸಲಾಗಿದೆ.ಫೆಬ್ರವರಿ 15 ರ ಅಂತ್ಯಕ್ಕೆ ರೂ. 0.55 ಲಕ್ಷಗಳ ಅನುದಾನ ಬಿಡುಗಡೆಯಾಗಿದೆ. ಈ ಹುದ್ದೆಯು ಖಾಲಿಯಿರುವುದರಿಂದ ಅನುದಾನ ಖರ್ಚಾಗಿ ರುವುದಿಲ್ಲ.

### 3. 2225-03-277-2-13 ಮೊರಾರ್ಜಿ ದೇಸಾಯಿ ವಸತಿ ಶಾಲೆಯ ನಿರ್ವಹಣೆ :- ರೂ. 35.00 ಲಕ್ಷ

ಈ ಕಾರ್ಯಕ್ರಮದಡಿ ಮೈಸೂರು ತಾಲ್ಲೂಕಿನ ದೊಡ್ಡಹುಂಡಿ ಗ್ರಾಮದಲ್ಲಿ ಒಂದು ವಸತಿ ಶಾಲೆ ಕಾರ್ಯನಿರ್ವಹಿಸುತ್ತಿದೆ. ಇದರ ಸಂಖ್ಯಾಬಲ 250 ಆಗಿರುತ್ತದೆ. 2006-07 ನೇ ಸಾಲಿನಲ್ಲಿ 207 ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ.ಈ ವಸತಿ ಶಾಲೆಗೆ ಪ್ರಾಂಶುಪಾಲರು, ಶಿಕ್ಷಕರು, ವಾರ್ಡನ್, ಅಡಿಗೆಯವರು, ಅಡಿಗೆಸಹಾಯಕರು, ಜವಾನರು 25 ಹುದ್ದೆಗಳು ಮಂಜೂರಾಗಿದ್ದು, ಇವರು ಗಳ ವೇತನ ಮತ್ತು ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 500-00 ರಂತೆ ಉಚಿತ ಭೋಜನಾ, ಇತರೆ ಸೌಲಭ್ಯ ನೀಡಲು 2006-07 ನೇ ಸಾಲಿಗೆ ರೂ. 35.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಫೆಬ್ರವರಿ 15 ರ ಅಂತ್ಯಕ್ಕೆ ರೂ. 34.98 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 21.051 ಲಕ್ಷಗಳ ಅನುದಾನವನ್ನು ಖರ್ಚು ಭರಿಸಲಾಗಿದೆ.

1. **2225-03-277-2-34 ವೃತ್ತಿ ಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಡುತ್ತಿರುವ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನಾ ವೆಚ್ಚ ಸಂದಾಯ :- ರೂ. 3.00 ಲಕ್ಷ**

ಜಿಲ್ಲೆಯಲ್ಲಿ ವೃತ್ತಿ ಪರ ಕೋರ್ಸ್‌ಗಳಾದ B.E., M.B.B.S., B.D.S., B.Ed., ಹೋಮಿಯೋಪತಿ ಯುನಾನಿ ಇತ್ಯಾದಿ ಸಮಾನ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವರ್ಗ 2ಎ,2ಬಿ,3ಎ,ಮತ್ತು 3ಬಿ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 200-00 ರಂತೆ 10 ತಿಂಗಳಿಗೆ ಹೆಚ್ಚುವರಿ ಭೊಜನಾ ವೆಚ್ಚ ಸಂದಾಯ ಮಂಜೂರು ಮಾಡಲು 2006-07 ನೇ ಸಾಲಿಗೆ ರೂ. 3.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಫೆಬ್ರವರಿ 15 ರ ಅಂತ್ಯಕ್ಕೆ ರೂ. 3.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ರೂ. 1.847 ಲಕ್ಷಗಳ ಅನುದಾನವನ್ನು ಖರ್ಚು ಭರಿಸಲಾಗಿದೆ.

**5. 2225-03-277-2-47 ಮೆಟ್ರಿಕ್ ಪೂರ್ವ /ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆ :- ರೂ. 33.00 ಲಕ್ಷ**

ಈ ಕಾರ್ಯಕ್ರಮದಡಿ 2 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು, 2 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಕಾರ್ಯ ನಿರ್ವಹಿಸುತ್ತಿವೆ. ಇವುಗಳ ಮಂಜೂರಾತಿ ಸಂಖ್ಯೆ 200 ಆಗಿರುತ್ತದೆ. ಈ ವಿದ್ಯಾರ್ಥಿ ನಿಲಯಗಳಿಗೆ 19 ಹುದ್ದೆಗಳು ಮಂಜೂರಾಗಿರುತ್ತದೆ. ಸಿಬ್ಬಂದಿಯ ವೇತನ & 200 ವಿದ್ಯಾರ್ಥಿಗಳ ಭೋಜನಾ ವೆಚ್ಚಕ್ಕೆ ಮಾಹೆಯಾನ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ರೂ. 450-00 ರಂತೆ, ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ರೂ. 500-00 ರಂತೆ 10 ತಿಂಗಳಿಗೆ ಹಾಗೂ ಇತರೆ ಉಚಿತ ಸೌಲಭ್ಯ ಗಳನ್ನು ನೀಡಲು 2006-07 ನೇ ಸಾಲಿಗೆ ರೂ. 33.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಫೆಬ್ರವರಿ 15 ರ ಅಂತ್ಯಕ್ಕೆ ರೂ. 33.38 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 16.565 ಲಕ್ಷಗಳ ಅನುದಾನವನ್ನು ಖರ್ಚು ಭರಿಸಲಾಗಿದೆ.

**6. 2225-03-277-2-71 ಮೆಟ್ರಿಕ್ ಪೂರ್ವ /ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆ :- ರೂ. 23.00 ಲಕ್ಷ**

ಈ ಕಾರ್ಯಕ್ರಮದಡಿ ಒಂದು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ, ಒಂದು ಮೆಟ್ರಿಕ್ ನಂತರದ ವೃತ್ತಿ ಪರ ವಿದ್ಯಾರ್ಥಿ ನಿಲಯ, & ಒಂದು ಸ್ನಾತಕೋತ್ತರ ಬಾಲಕಿಯರ ವಿದ್ಯಾರ್ಥಿ ನಿಲಯಗಳು ಕಾರ್ಯ ನಿರ್ವಹಿಸುತ್ತಿವೆ. ಇವುಗಳ ಮಂಜೂರಾತಿ ಸಂಖ್ಯೆ 130 ಆಗಿರುತ್ತದೆ. 22 ಹುದ್ದೆಗಳ ವೇತನಕ್ಕೆ & ವಿದ್ಯಾರ್ಥಿಗಳ ಭೋಜನಾ ವೆಚ್ಚಕ್ಕೆ ಮಾಹೆಯಾನ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ರೂ. 450-00 ರಂತೆ, ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ರೂ. 500-00 ರಂತೆ 10 ತಿಂಗಳಿಗೆ ಹಾಗೂ ಇತರೆ ಉಚಿತ ಸೌಲಭ್ಯ ಗಳನ್ನು ನೀಡಲು 2006-07 ನೇ ಸಾಲಿಗೆ ರೂ. 23.00 ಲಕ್ಷಗಳ ಅನುದಾನ ಒದಗಿಸಿಲಾಗಿದೆ. ಫೆಬ್ರವರಿ 15 ರ ಅಂತ್ಯಕ್ಕೆ ರೂ. 23.25 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 13.024 ಲಕ್ಷಗಳ ಅನುದಾನವನ್ನು ಖರ್ಚು ಭರಿಸಲಾಗಿದೆ.

1. **2225-03-277-2-89 ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ ಮತ್ತು ಹೊಸ ಕೇಂದ್ರಗಳ ಪ್ರಾರಂಭ :- ರೂ. 1.30 ಲಕ್ಷ**

ಈ ಕಾರ್ಯಕ್ರಮದಡಿ 2 ಹೊಲಿಗೆ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ ತರಬೇತಿದಾರರ ಸಂಖ್ಯೆ 40 ಆಗಿರುತ್ತದೆ. 40 ತರಬೇತಿದಾರರು ಯೋಜನೇತರಕ್ಕೆ ವರ್ಗಾವಣೆಗೊಂಡಿರುತ್ತದೆ. ಎರಡು ಹೊಲಿಗೆ ಶಿಕ್ಷಕಿಯರ ಹುದ್ದೆಗಳು ಯೋಜನೆಯಲ್ಲಿ ಮುಂದುವರಿಯುತ್ತಿವೆ. 2 ಸಿಬ್ಬಂದಿಯ ವೇತನ ಪಾವತಿಗಾಗಿ 2006-07 ನೇ ಸಾಲಿಗೆ ರೂ.

1.30 ಲಕ್ಷಗಳ ಅನುದಾನ ಒದಗಿಸಲಾಗಿದೆ.ಫೆಬ್ರವರಿ 15 ರ ಅಂತ್ಯಕ್ಕೆ ರೂ. 1.35 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ರೂ. 0.877 ಲಕ್ಷಗಳ ಅನುದಾನ ಖರ್ಚು ಭರಿಸಲಾಗಿದೆ.

2. **2225-03-277-2-93 ವಕೀಲರಿಗೆ ಶಿಷ್ಯವೇತನ :- ರೂ. 1.96 ಲಕ್ಷ**

ನ್ಯಾಯಾಂಗ ಆಡಳಿತದಲ್ಲಿ ತರಬೇತಿ ಪಡೆಯುತ್ತಿರುವ 24 ಕಾನೂನು ಪದವೀಧರರಿಗೆ ಮಾಹೆಯಾನ ರೂ. 1,000-00 ರಂತೆ ಶಿಷ್ಯವೇತನವನ್ನು ಪಾವತಿಸಲಾಗುತ್ತಿದೆ. ಪ್ರಯುಕ್ತ 24 ಕಾನೂನು ಪದವೀಧರರಿಗೆ 12 ತಿಂಗಳಿಗೆ ಶಿಷ್ಯವೇತನ ಪಾವತಿಸಲು 2006-07 ನೇ ಸಾಲಿಗೆ ಶಿಷ್ಯವೇತನವನ್ನು ಮಂಜೂರು ಮಾಡಲು ರೂ. 1.96 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಫೆಬ್ರವರಿ 15 ರ ಅಂತ್ಯಕ್ಕೆ ರೂ. 1.96 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, 1.472 ಲಕ್ಷಗಳ ಅನುದಾನ ಖರ್ಚು ಭರಿಸಲಾಗಿದೆ.

**9. 2225-03-800-2-08 ಬೆಳ್ಳಿ ಬೆಳಕು ರೂ. 1.00 ಲಕ್ಷ**

ಈ ಕಾರ್ಯಕ್ರಮದಡಿ ವರ್ಗ 1 ರ ಜನಾಂಗದವರಿಗೆ ಮನೆ ನಿರ್ಮಾಣಕ್ಕೆ ಪ್ರತಿ ಫಲಾನುಭವಿಗೆ ರೂ. 20,000-00 ರಂತೆ ಸಹಾಯಧನ ಮಂಜೂರು ಮಾಡಲು ರೂ. 1.00 ಗಳ ಅನುದಾನ ಬೇಕಾಗಿರುತ್ತದೆ. ಗರಿಷ್ಟ 60 ಜನರಿಗೆ ಸಹಾಯಧನ ಮಂಜೂರು ಮಾಡಬಹುದು. ವರ್ಗ 1 ರ ಜನಾಂಗದವರಿಗೆ ಸಮುದಾಯ ಭವನ ನಿರ್ಮಿಸಲು ರೂ. 1.00 ಲಕ್ಷ, ಚರಂಡಿ ನಿರ್ಮಾಣಕ್ಕೆ ರೂ. 1.00 ಲಕ್ಷ, ಸಂಪರ್ಕ ರಸ್ತೆಗೆ ರೂ. 1.00 ಲಕ್ಷ, ನೀರು ಸರಬರಾಜಿಗೆ ರೂ. 2.75 ಲಕ್ಷ, ವಿದ್ಯುತ್ ದೀಪಕ್ಕೆ ರೂ. 1.00 ಗಳ ಸಹಾಯದನ ಮಂಜೂರು ಮಾಡಬಹುದಾಗಿದೆ. ಈ ಲೆಕ್ಕಶೀರ್ಷಿಕೆಯಡಿ 2006-07 ನೇ ಸಾಲಿಗೆ ರೂ. 1.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.ಫೆಬ್ರವರಿ 15 ರ ಅಂತ್ಯಕ್ಕೆ ರೂ. 1.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ರೂ. 0.75 ಲಕ್ಷಗಳ ಅನುದಾನ ಖರ್ಚು ಭರಿಸಲಾಗಿದೆ.

10. **2225-03-800-0-53 ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ನಿರ್ಮಾಣ ಮತ್ತು ವಿಶೇಷ ದುರಸ್ತಿ ರೂ. 25.00 ಲಕ್ಷ :-**

ಮೈಸೂರು ಜಿಲ್ಲೆಯಲ್ಲಿ 61 ವಿದ್ಯಾರ್ಥಿ ನಿಲಯಗಳು ,4 ಆಶ್ರಮ ಶಾಲೆಗಳು ಮತ್ತು ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಾರ್ಯ ನಿರ್ವಹಿಸುತ್ತಿವೆ. ಇವುಗಳಲ್ಲಿ 44 ವಿದ್ಯಾರ್ಥಿ ನಿಲಯಗಳು, 2 ಆಶ್ರಮ ಶಾಲೆಗಳು, 1 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಸ್ವಂತ ಕಟ್ಟಡಗಳ ರಿಪೇರಿ, & ಸುಣ್ಣ ಬಣ್ಣ ಇತ್ಯಾದಿಗಳಿಗಾಗಿ 2006-07 ನೇ ಸಾಲಿಗೆ ರೂ. 25.00 ಲಕ್ಷಗಳ ಅನುದಾನ ಒದಗಿಸಲಾಗಿದೆ ಫೆಬ್ರವರಿ 15 ರ ಅಂತ್ಯಕ್ಕೆ ರೂ. 18.75 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 10.00 ಲಕ್ಷಗಳನ್ನು ಖರ್ಚು ಭರಿಸಲಾಗಿದೆ.

11. **2225-03-102-3-01 ಅಲ್ಪಸಂಖ್ಯಾತರರಿಗಾಗಿ ತರಬೇತಿ & ಕಾನೂನು ಪದವೀಧರರಿಗೆ ಶಿಷ್ಯವೇತನ**

ನ್ಯಾಯಾಂಗ ಆಡಳಿತದಲ್ಲಿ ತರಬೇತಿ ಪಡೆಯುತ್ತಿರುವ ಅಲ್ಪಸಂಖ್ಯಾತರರಾದ ಮುಸ್ಲಿಂ, ಕ್ರಿಶ್ಚಿಯನ್, ಭೌದ್ದರು, ಸಿಖ್ಖರು, ಪಾರ್ಸಿಯನ್ & ಆಂಗ್ಲೋ ಇಂಡಿಯನ್ 8 ಕಾನೂನು ಪದವೀಧರರಿಗೆ ಮಾಹೆಯಾನ ರೂ. 1,000-00 ರಂತೆ ಶಿಷ್ಯವೇತನವನ್ನು ಪಾವತಿಸಲಾಗುತ್ತಿದೆ. ಪ್ರಯುಕ್ತ 8 ಕಾನೂನು ಪದವೀಧರರಿಗೆ 12 ತಿಂಗಳಿಗೆ ಶಿಷ್ಯವೇತನ ಪಾವತಿಸಲು 2006-07 ನೇ ಸಾಲಿಗೆ ರೂ.1.45 ಲಕ್ಷಗಳ ಅನುದಾನ ಒದಗಿಸಿದ್ದು, ಫೆಬ್ರವರಿ 15 ಅಂತ್ಯಕ್ಕೆ 1.45 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 0.953 ಲಕ್ಷಗಳ ಅನುದಾನ ಖರ್ಚು ಭರಿಸಲಾಗಿದೆ.

12. <u>2225-03-102-3-03 ಅಲ್ಪಸಂಖ್ಯಾತರಿರಾಗಿ ಹಾಸ್ಟಲ್ ಗಳು</u> :-

ಈ ಕಾರ್ಯಕ್ರಮದಡಿ ಒಂದು ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ, ಒಂದು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಗಳು ಕಾರ್ಯ ನಿರ್ವಹಿಸುತ್ತಿವೆ. ಇವುಗಳ ಮಂಜೂರಾತಿ ಸಂಖ್ಯೆ 100 ಆಗಿರುತ್ತದೆ. 13 ಹುದ್ದೆಗಳ ವೇತನಕ್ಕೆ & ವಿದ್ಯಾರ್ಥಿಗಳ ಭೋಜನಾ ವೆಚ್ಚಕ್ಕೆ ಮಾಹೆಯಾನ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ರೂ. 450-00 ರಂತೆ, ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ರೂ. 500-00 ರಂತೆ 10 ತಿಂಗಳಿಗೆ ಹಾಗೂ ಇತರೆ ಉಚಿತ ಸೌಲಭ್ಯ ಗಳನ್ನು ನೀಡಲು 2006-07 ನೆ ಸಾಲಿಗೆ ರೂ. 16.50 ಲಕ್ಷಗಳ ಅನುದಾನ ಒದಗಿಸಿದ್ದು, ಫಬ್ರವರಿ 15 ರ ಅಂತ್ಯಕ್ಕೆ ರೂ. 16.71 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 15.785 ಲಕ್ಷಗಳ ಅನುದಾನ ಖರ್ಚು ಭರಿಸಲಾಗಿದೆ.

13. <u>2225-03-102-3-05 ಅಲ್ಪಸಂಖ್ಯಾತರರಿಗಾಗಿ ವೃತ್ತಿ ಪರ ತರಬೇತಿ :-</u>

ಅಲ್ಪಸಂಖ್ಯಾತರ ನಿರುದ್ಯೋಗಿ ಯುವಕ /ಯುವತಿಯರಿಗೆ ವಿವಿಧ ವೃತ್ತಿಪರ ಕೋರ್ಸ್‌ಗಳಾದ ಫ್ಯಾಶನ್ ಡಿಸೈನಿಂಗ್, ಗಾರ್ಮೆಂಟ್ ಮೇಕಿಂಗ್, ಸರ್ವಿಸಿಂಗ್ ಇನ್ ಎಲೆಕ್ಟ್ರಾನಿಕ್ ಇಕ್ವಿಪ್ ಮೆಂಟ್, ಎಲೆಕ್ಟ್ರಿಕಲ್ ವೈಯರ್ ಮನ್ ಟ್ರೈನಿಂಗ್ ಫಾರ್ ವೈಯರಿಂಗ್ ಲೈಸೆನ್ಸ್ ಏರ್ ಕಂಡಿಶನಿಂಗ್ ಇನ್ ರಿಫ್ರಿರಿರೇಷನ್, ಸೂಪರ್ ವೈಜರ್ ಇನ್ ಸಿವಿಲ್ ಇಂಜಿನಿಯರಿಂಗ್ ಕನ್ ಸ್ಟ್ರಕ್ಷನ್, ರಿಪೇರಿಂಗ್ ಆಫ್ ಡೊಮೆಸ್ಟಿಕ್ ಎಲೆಕ್ಟ್ರಿಕಲ್ ಅಪ್ಲೆಯೆನ್ಸಸ್ ಗಳಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಪಾಲಿಟೆಕ್ನಿಕ್ ಮೂಲಕ ತರಬೇತಿ ನೀಡಿ ಸ್ವಯಂ ಉದ್ಯೋಗದಲ್ಲಿ ಸ್ವಾವಲಂಬಿಗಳಾಗಲು ಪ್ರೋತ್ಸಾಹ ನೀಡಲಾಗುವುದು. 2006-07 ನೇ ಸಾಲಿಗೆ ರೂ. 2.00 ಲಕ್ಷಗಳ ಅನುದಾನ ಒದಗಿಸಿದ್ದು ಫೆಬ್ರವರಿ 15 ರ ಅಂತ್ಯಕ್ಕೆ ರೂ.2.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 0.722 ಲಕ್ಷಗಳ ಅನುದಾನ ಖರ್ಚು ಭರಿಸಲಾಗಿದೆ.

14. <u>2225-03-277-2-12 ಮೊರಾಜಿ ದೇಸಾಯಿ ನಿವಾಸಿ ಶಾಲೆಗಳು :-</u>

ಈ ಕಾರ್ಯಕ್ರಮದಡಿ ಮೈಸೂರು ತಾಲ್ಲೂಕಿನ ದೊಡ್ಡಹುಂಡಿ ಗ್ರಾಮದಲ್ಲಿ ಒಂದು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಾರ್ಯನಿರ್ವಹಿಸುತ್ತಿದೆ. ಇದರ ಸಂಖ್ಯಾಬಲ 50 ಆಗಿರುತ್ತದೆ. ಈ ವಸತಿ ಶಾಲೆ ಪ್ರಾಂಶುಪಾಲರು, ಶಿಕ್ಷಕರು, ವಾರ್ಡನ್, ಅಡಿಗೆಯವರು, 7 ಹುದ್ದೆಗಳು ಮಂಜೂರಾಗಿದ್ದು, ಇವರುಗಳ ವೇತನಕ್ಕೆ ಮತ್ತು ವಿದ್ಯಾರ್ಥಿಗಳ ಭೋಜನಾ ವೆಚ್ಚಕ್ಕೆ ಮಾಹೆಯಾನ ರೂ. 500-00 ರಂತೆ 10 ತಿಂಗಳಿಗೆ ಹಾಗೂ ಇತರೆ ಸೌಲಭ್ಯಗಳನ್ನು ನೀಡಲು ಒಟ್ಟು ರೂ. 12.00 ಲಕ್ಷಗಳ ಅನುದಾನ ಒದಗಿಸಿದ್ದು ಫೆಬ್ರವರಿ 15 ರ ಅಂತ್ಯಕ್ಕೆ ರೂ. 12.00 ಅನುದಾನ ಬಿಡುಗಡೆಯಾಗಿದ್ದು ರೂ. 1.004 ಲಕ್ಷಗಳ ಅನುದಾನ ಖರ್ಚು ಭರಿಸಲಾಗಿದೆ.

## ತಾಲ್ಲೂಕು ಪಂಚಾಯತ್ ಕಾರ್ಯ ಕ್ರಮಗಳು :-

<u>1. 2225-03-001-0-01 ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳ ವೇತನ ರೂ. 2.09ಲಕ್ಷ</u>

ಈ ಕಾರ್ಯಕ್ರಮದಡಿ ತಾಲ್ಲೂಕು ಮಟ್ಟದಲ್ಲಿ ವಿದ್ಯಾರ್ಥಿ ನಿಲಯಗಳು, ಆಶ್ರಮ ಶಾಲೆಗಳ ನಿರ್ವಹಣೆ, ಶಾಲಾ ಕಾಲೇಜುಗಳಿಗೆ
ಭೇಟಿ ನೀಡಿ ತಪಾಸಣೆ ಇತ್ಯಾದಿಗಳ ಕರ್ತವ್ಯ ನಿರ್ವಹಣೆ ಸಿಬ್ಬಂದಿಯವರು ಇರುತ್ತಾರೆ. ಮೈಸೂರು ಜಿಲ್ಲೆಯ 7 ತಾಲ್ಲೂಕುಗಳಲ್ಲಿ 6 ತಾಲ್ಲೂಕುಗಳ ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳ ವೇತನ ಯೋಜನೇತರಕ್ಕೆ ವರ್ಗಾವಣೆಗೊಂಡಿರುತ್ತದೆ.

ಯೋಜನೆಯಲ್ಲಿ ಒಬ್ಬರಿಗೆ ವೇತನ ಪಾವತಿಸಲು 2006-07 ನೇ ಸಾಲಿಗೆ ರೂ. 2.09 ಲಕ್ಷಗಳ ಅನುದಾನ ಒದಗಿಸಿದ್ದು ಫೆಬ್ರವರಿ 15 ರ ರ ಅಂತ್ಯಕ್ಕೆ ರೂ. 2.08 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು , 1.422 ಲಕ್ಷಗಳ ಅನುದಾನವನ್ನು ಒಬ್ಬ ಸಿಬ್ಬಂದಿಯ ವೇತನಕ್ಕಾಗಿ ಖರ್ಚು ಭರಿಸಿದೆ.

1. 2225-03-277-2-53 ವಿದ್ಯಾರ್ಥಿ ನಿಲಯಗಳಲ್ಲಿರುವವರಿಗೆ ಪ್ರೋತ್ಸಾಹಕಗಳು :- ರೂ. 1.00 ಲಕ್ಷ

ಈ ಕಾರ್ಯಕ್ರಮದಡಿ ಇಲಾಖಾ ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ರೂ. 200.00 ರಂತೆ ಪದವಿ ತರಗತಿಯ ವಿದ್ಯಾರ್ಥಿಗಳಿಗೆ ರೂ. 300.00 ರಂತೆ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರೂ. 500.00 ರಂತೆ ಮಂಜೂರು ಮಾಡಲು 2006-07 ನೇ ಸಾಲಿಗೆ ರೂ. 1.00 ಲಕ್ಷಗಳ ಅನುದಾನವನ್ನು ಒದಗಿಸಿದ್ದು ಫೆಬ್ರವರಿ 15 ರ ಅಂತ್ಯಕ್ಕೆ ರೂ. 1.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 0.918 ಲಕ್ಷಗಳ ಅನುದಾನವನ್ನು ಪ್ರೋತ್ಸಾಹಧನವನ್ನು ಮಂಜೂರು ಮಾಡಿ ಖರ್ಚು ಭರಿಸಿದೆ.

2. 2225-03-277-2-72 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ನಿರ್ವಹಣೆ :- ರೂ. 2.50 ಲಕ್ಷ

ಈ ಕಾರ್ಯಕ್ರಮದಡಿ 8 ಸಿಬ್ಬಂದಿಯವರು ಇರುತ್ತಾರೆ. 5 ಸಿಬ್ಬಂದಿಯವರು ಯೋಜನೇತರಕ್ಕೆ ವರ್ಗಾವಣೆಗೊಂಡಿರುತ್ತಾರೆ. ಯೋಜನೆ ಕಾರ್ಯಕ್ರಮದಡಿ ಉಳಿದ 3 ಸಿಬ್ಬಂದಿಯವರಿಗೆ ವೇತನ ಪಾವತಿಸಲು2006-07 ನೇ ಸಾಲಿಗೆ ರೂ. 2.50 ಲಕ್ಷಗಳ ಅನುದಾನ ಒದಗಿಸಿದ್ದು ಫೆಬ್ರವರಿ 15 ರ ಅಂತ್ಯಕ್ಕೆ 2.50 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ರೂ. 2.214 ಲಕ್ಷಗಳ ಅನುದಾನವನ್ನು ವೇತನ ಪಾವತಿಸಲು ಖರ್ಚು ಭರಿಸಿದೆ.

3. 2225-03-277-2-73 ಮೆಟ್ರಿಕ್ ಪೂರ್ವ /ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ :- ರೂ. 6.00 ಲಕ್ಷ

ಮೈಸೂರು ಜಿಲ್ಲೆಯಲ್ಲಿ 5 ನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರಿಗೆ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗುವುದು.

| | | |
|---|---|---|
| 1. 5 ರಿಂದ 7 ತರಗತಿಯ ವಿದ್ಯಾರ್ಥಿಗಳಿಗೆ | ವಾರ್ಷಿಕ | ರೂ. 75.00 |
| 2. 8 ರಿಂದ 10 ನೇ ತರಗತಿಯ ವಿದ್ಯಾರ್ಥಿಗಳಿಗೆ | ವಾರ್ಷಿಕ | ರೂ. 100.00 |
| 1. P.U.C.,T.C.H., B.A.,B.Com.,B.B.M.,.B.Sc., I.T.I ವಿದ್ಯಾರ್ಥಿಗಳಿಗೆ | ವಾರ್ಷಿಕ | ರೂ. 300.00 |
| 2. M.A.M.Sc., M.Com.,M.B.A., M.Ed.,B.Ed. L.L.B L.. L.M. ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ | ವಾರ್ಷಿಕ | ರೂ. 400.00 |
| 5. B.E., M.B.B.S., ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ | ವಾರ್ಷಿಕ | ರೂ. 500.00 |

ಮೇಲ್ಕಂಡಂತೆ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲು 2006-07 ನೇ ಸಾಲಿಗೆ ರೂ. 6.00 ಲಕ್ಷಗಳ ಅನುದಾನ ಒದಗಿಸಿದ್ದು ಫೆಬ್ರವರಿ 15 ರ ಅಂತ್ಯಕ್ಕೆ ರೂ. 6.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 5.65 ಲಕ್ಷಗಳ ಅನುದಾನವನ್ನು ವಿದ್ಯಾರ್ಥಿ ವೇತನ ಮಂಜೂರು ಮಾಡಲು ಖರ್ಚು ಭರಿಸಿದೆ.

4. 2225-03-277-2-76 ಹೆಚ್ಚುವರಿ ಭೋಜನಾ ವೆಚ್ಚ & ವಸತಿ ವೆಚ್ಚಗಳ ಹಣ ಸಂದಾಯ :-

ಮೆಟ್ರಿಕ್ ನಂತರದ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವರ್ಗ 1 ಜನಾಂಗ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 200-00 ರಂತೆ 10 ತಿಂಗಳಿಗೆ ಹೆಚ್ಚುವರಿ ಭೊಜನಾ ವೆಚ್ಚ ಸಂದಾಯ ಮಂಜೂರು ಮಾಡಲು 2006-07 ನೇ ಸಾಲಿಗೆ ರೂ.2.57 ಲಕ್ಷಗಳ ಅನುದಾನವನ್ನು ಒದಗಿಸಿದ್ದು, ಫೆಬ್ರವರಿ 15 ರ ಅಂತ್ಯಕ್ಕೆ ರೂ. 2.57 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 0.778 ಲಕ್ಷಗಳ ಅನುದಾನವನ್ನು ಖರ್ಚು ಭರಿಸಲಾಗಿದೆ.

**6. 2225-03-277-2-88 ವಿದ್ಯಾರ್ಥಿ ನಿಲಯಗಳ ಸುಧಾರಣೆ :- ರೂ. 8.00 ಲಕ್ಷ**

ಮೈಸೂರು ಜಿಲ್ಲೆಯಲ್ಲಿ 47 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು, 15 ಮೆಟ್ರಿಕ್ ನಂತರದ ವಿದ್ಯಾಥಿ ನಿಲಯಗಳು, 4 ಆಶ್ರಮ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು ಒಟ್ಟು 3557 ವಿದ್ಯಾರ್ಥಿಗಳು ಉಚಿತ ಊಟ,ವಸತಿ ಮತ್ತು ಇತರೆ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಈ ವಿದ್ಯಾರ್ಥಿಗಳಿಗೆ ಅವಶ್ಯಕವಾಗಿ ಬೇಕಾದ ಮೂಲಭೂತ ಸೌಕರ್ಯಗಳಾದ ಹಾಸಿಗೆಹೊದಿಕೆ, ಗ್ರಂಥಾಲಯ ಪುಸ್ತಕ, ಪಾತ್ರೆಗಳು,ಆಟದ ಸಾಮಗ್ರಿಗಳು ಇತ್ಯಾದಿಗಳನ್ನು ಖರೀದಿಸಲು 2006-07 ನೇ ಸಾಲಿಗೆ ರೂ. 8.00 ಲಕ್ಷಗಳ ಅನುದಾನ ಒದಗಿಸಿದ್ದು ಫೆಬ್ರವರಿ 15 ರ ಅಂತ್ಯಕ್ಕೆ ರೂ. 8.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 5.18 ಲಕ್ಷಗಳ ಅನುದಾನವನ್ನು ಖರ್ಚು ಭರಿಸಿದೆ.

**7. 2225-03-102-2-11 ಔದ್ಯಮಿಕ ತರಬೇತಿ ಸಂಸ್ಥೆ/ ಡಿಪ್ಲಮೊ ಕೋರ್ಸ್‌ಗಳ ಪ್ರಶಿಕ್ಷುಗಳಿಗೆ ಶಿಷ್ಯವೇತನ ( ಅಲ್ಪಸಂಖ್ಯಾತರಿಗಾಗಿ) ರೂ. 1.08 ಲಕ್ಷಗಳು**

ಅಲ್ಪಸಂಖ್ಯಾತರ ಸಮುದಾಯಗಳಾದ ಮುಸ್ಲಿಂ, ಸಿಕ್ಕರು, ಜೈನರು ಭೌದ್ದರು ಜನಾಂಗದ ವಿದ್ಯಾರ್ಥಿಗಳು ಐಟಿಐ/ ಡಿಪ್ಲಮೋ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 150.00 ರಂತೆ 10 ತಿಂಗಳ ಅವಧಿಗೆ ಶಿಷ್ಯವೇತನವನ್ನು ಮಂಜೂರು ಮಾಡಲು 2006-07 ನೇ ಸಾಲಿಗೆ ರೂ. 1.08 ಲಕ್ಷಗಳ ಅನುದಾನವನ್ನು ಒದಗಿಸಿದ್ದು, ಫೆಬ್ರವರಿ 15 ರ ಅಂತ್ಯಕ್ಕೆ ರೂ. 1.08 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 0.688 ಲಕ್ಷಗಳ ಅನುದಾನವನ್ನು ಖರ್ಚು ಭರಿಸಲಾಗಿದೆ.

ಒಟ್ಟಾರೆ ಜಿಲ್ಲಾ ವಲಯ ಯೋಜನೆಯಡಿ 2006-07 ನೇ ಸಾಲಿಗೆ ಜಿಲ್ಲಾ ಪಂಚಯತ್ ಕಾರ್ಯಕ್ರಮದಡಿ ರೂ. 160.76 ಲಕ್ಷಗಳ ಅನುದಾನವನ್ನು ತಾಲ್ಲೂಕು ಪಂಚಾಯತ್ ಕಾರ್ಯಕ್ರಮದಡಿ ರೂ. 23.24 ಲಕ್ಷಗಳು ಒಟ್ಟು 184.00 ಲಕ್ಷಗಳ ಅನುದಾನವನ್ನು ಒದಗಿಸಿದ್ದು ಫೆಬ್ರವರಿ 15 ರ ಅಂತ್ಯಕ್ಕೆ ಜಿಲ್ಲಾ ವಲಯ ಯೋಜನೆಯಡಿ ರೂ. 155.38 ಲಕ್ಷಗಳ ಅನುದಾನ , ತಾಲ್ಲೂಕು ಪಂಚಾಯತ್ ಕಾರ್ಯಕ್ರಮದಡಿ ರೂ. 23.23 ಲಕ್ಷಗಳ ಅನುದಾನ ಒಟ್ಟು 178.61 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಫೆಬ್ರವರಿ 15 ರ ಅಂತ್ಯಕ್ಕೆ ಜಿಲ್ಲಾ ವಲಯ ಯೋಜನೆಯಡಿ ರೂ. 88.065 ಲಕ್ಷಗಳು ಹಾಗೂ ತಾಲ್ಲೂಕು ಪಂಚಾಯತ್ ಕಾರ್ಯಕ್ರಮದಡಿ ರೂ. 16.85 ಲಕ್ಷಗಳು ಒಟ್ಟು 104.915 ಲಕ್ಷಗಳ ಅನುದಾನವನ್ನು ಖರ್ಚು ಭರಿಸಲಾಗಿದೆ.

## ಜಿಲ್ಲಾ ವಲಯ ಯೋಜನೇತರ

1. **2225-03-001-0-71 ಕಾರ್ಯ ನಿರ್ವಾಹಕ ಸಿಬ್ಬಂದಿ :- ರೂ.ವೇತನ ರೂ.10.31 ಲಕ್ಷ ,ವೇತನೇತರ ರೂ 1.79 ಲಕ್ಷ ಒಟ್ಟು 12.10 ಲಕ್ಷ**

ಇಲಾಖಾ ಕಾರ್ಯಕ್ರಮಗಳನ್ನು ಜಿಲ್ಲಾ ಕಚೇರಿಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಈ ಜಿಲ್ಲಾ ಕಚೇರಿಯಲ್ಲಿ ಒಬ್ಬರು ಅಧಿಕಾರಿಗಳು ಸೇರಿದಂತೆ 10 ಸಿಬ್ಬಂದಿಯವರ ಮೂಲಕ ಜಿಲ್ಲೆಯ ವಿದ್ಯಾರ್ಥಿ ನಿಲಯಗಳ ಆಡಳಿತ ಮತ್ತು ನಿರ್ವಹಣೆಯನ್ನು ನಿರ್ವಹಿಸಲಾಗುತ್ತಿದೆ. 10 ಸಿಬ್ಬಂದಿಯವರ ವೇತನ, ಕಚೇರಿ ವಾಹನಕ್ಕೆ ಇಂಧನ, ವಾಹನ ದುರಸ್ತಿ, ದೂರವಾಣಿ ಕರೆಗಳ ವೆಚ್ಚ, ವಿದ್ಯುತ್ ವೆಚ್ಚ , ಸ್ಟೇಷನರಿ ಖರೀದಿ ಇತ್ಯಾದಿ ಬಾಬ್ತುಗಳಿಗೆ 2006-07 ನೇ ಸಾಲಿಗೆ ವೇತನಕ್ಕಾಗಿ ರೂ. 10.31 ಲಕ್ಷ ಹಾಗೂ ವೇತನೇತರಕ್ಕಾಗಿ ರೂ 1.79 ಲಕ್ಷ ಒಟ್ಟು ರೂ. 12.10 ಲಕ್ಷಗಳ ಅನುದಾನವನ್ನು ಒದಗಿಸಿದ್ದು ಫೆಬ್ರವರಿ 15 ರ ಅಂತ್ಯಕ್ಕೆ ವೇತನಕ್ಕೆ ರೂ. 10.29 ಲಕ್ಷ ಹಾಗೂ ವೇತನೇತರಕ್ಕೆ ರೂ 1.77 ಲಕ್ಷ ಒಟ್ಟು 6.04 ಲಕ್ಷಗಳು ಬಿಡುಗಡೆಯಾಗಿದ್ದು , ವೇತನಕ್ಕೆ ರೂ. 11.400 ಹಾಗೂ ವೇತನೇತರಕ್ಕಾಗಿ ರೂ. 1.686 ಲಕ್ಷಗಳು ಒಟ್ಟು ರೂ. 13.086 ಲಕ್ಷ್ಯ ಅನುದಾನವನ್ನು ಖರ್ಚು ಭರಿಸಲಾಗಿದೆ.

**2. 2225-03-277-1-03 ಆಶ್ರಮ ಶಾಲೆಗಳು :- ವೇತನ ರೂ 7.64 ಲಕ್ಷ, ವೇತನೇತರ ರೂ. 7.20 ಲಕ್ಷ ಒಟ್ಟು ರೂ. 14.84 ಲಕ್ಷಗಳು**

ಈ ಕಾರ್ಯಕ್ರಮದಡಿ ಜಿಲ್ಲೆಯಲ್ಲಿ 4 ಆಶ್ರಮ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳ ಮಂಜೂರಾತಿ ಸಂಖ್ಯೆ 150 ಆಗಿರುತ್ತದೆ. ಈ ಆಶ್ರಮ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 350-00 ರಂತೆ 10 ತಿಂಗಳಿಗೆ ಉಚಿತ ಭೋಜನ ವೆಚ್ಚ & ಇತರೆ ಸೌಲಭ್ಯಗಳನ್ನು ನೀಡಲು & ಸಿಬ್ಬಂದಿ ವೇತನ ಪಾವತಿಸಲು 2006-07 ನೇ ಸಾಲಿಗೆ ಸಿಬ್ಬಂದಿಯ ವೇತನಕ್ಕಾಗಿ ರೂ. 7.64 ಲಕ್ಷ ಹಾಗೂ ಆಶ್ರಮ ಶಾಲೆಗಳ ನಿರ್ವಹಣೆಗಾಗಿ ರೂ. 7.20 ಲಕ್ಷ ಒಟ್ಟು ರೂ. 14.84 ಲಕ್ಷಗಳ ಅನುದಾನವನ್ನು ಒದಗಿಸಿದ್ದು ಫೆಬ್ರವರಿ 15 ರ ಅಂತ್ಯಕ್ಕೆ ವೇತನಕ್ಕೆ ರೂ. 7.64 ಲಕ್ಷ, ವೇತನೇತರಕ್ಕೆ ರೂ. 7.20 ಲಕ್ಷ ಒಟ್ಟು ರೂ 14.84 ಲಕ್ಷಗಳು ಬಿಡುಗಡೆಯಾಗಿದ್ದು ವೇತನಕ್ಕೆ ರೂ. 6.49 ಲಕ್ಷ ಹಾಗೂ ವೇತನೇತರಕ್ಕೆ 5.172 ಲಕ್ಷಗಳು ಒಟ್ಟು ರೂ. 11.662 ಲಕ್ಷಗಳ ಅನುದಾನವನ್ನು ಖರ್ಚು ಭರಿಸಲಾಗಿದೆ. ಇದರಿಂದ 150 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

3. **2225-03-277-2-05 : ಖಾಸಗಿ ವಿದ್ಯಾರ್ಥಿ ನಿಲಯಗಳ ಕಟ್ಟಡಗಳಿಗೆ ಸಹಾಯಧನ :- ರೂ. 0.50 ಲಕ್ಷ**

ಖಾಸಗಿ ವಿದ್ಯಾರ್ಥಿ ನಿಲಯಗಳ ಕಟ್ಟಡಗಳಿಗೆ ಸಹಾಯಧನ ಮಂಜೂರು ಮಾಡಲು 2006-07 ಸಾಲಿಗೆ ರೂ. 0.50 ಲಕ್ಷಗಳ ಅನುದಾನ ವನ್ನು ಒದಗಿಸಲಾಗಿದೆ.2006-07 ನೇ ಸಾಲಿನ ಫಬ್ರವರಿ 15 ರ ಅಂತ್ಯಕ್ಕೆ ರೂ. 0.50 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 0.15 ಲಕ್ಷಗಳ ಅನುದಾನವನ್ನು ಖರ್ಚು ಭರಿಸಲಾಗಿದೆ.

4. **2225-03-277-2-14 :- ಅಲ್ಪಸಂಖ್ಯಾತರ ಸಂಸ್ಥೆಗಳಿಂದ ನಡೆಸಲ್ಪಡುವ ವಿದ್ಯಾರ್ಥಿ ನಿಲಯಗಳು :-**

ಈ ಕಾರ್ಯಕ್ರಮದಡಿ ಜಿಲ್ಲೆಯಲ್ಲಿ ಒಂದು ಖಾಸಗಿ ಅಲ್ಪಸಂಖ್ಯಾತರ ಸಂಸ್ಥೆಗಳಿಂದ ನಡೆಸಲ್ಪಡುವ ವಿದ್ಯಾರ್ಥಿ ನಿಲಯ ಪಿರಿಯಾಪಟ್ಟಣ ತಾಲ್ಲೂಕಿನ ಬೈಲುಕುಪ್ಪೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇದರ ಮಂಜೂರಾತಿ ಸಂಖ್ಯೆ 75 ಆಗಿ ರುತ್ತದೆ. ಈ ವಿದ್ಯಾರ್ಥಿಗಳ ಭೋಜನಾ ವೆಚ್ಚಕ್ಕಾಗಿ ಮಾಹೆಯಾನ ರೂ. 350-00 ರಂತೆ 10 ತಿಂಗಳ ಅವಧಿಯವರಿಗೆ ಸಹಾಯಧನವನ್ನು ಮಂಜೂರು ಮಾಡಲಾಗುವುದು. 2006-07 ನೇ ಸಾಲಿಗೆ ರೂ. 2.39 ಲಕ್ಷಗಳ ಅನುದಾನ ಒದಗಿ ಸಿದ್ದು ಫೆಬ್ರವರಿ 15 ರ ಅಂತ್ಯಕ್ಕೆ ರೂ. 2.39 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 1.033 ಲಕ್ಷಗಳ ಅನುದಾನವನ್ನು ಖರ್ಚು ಭರಿಸಲಾಗಿದೆ.

5. <u>2225-03-277-2-15 ಅಲ್ಪಸಂಖ್ಯಾತರರಿಗಾಗಿ ಶಿಷ್ಯವೇತನ :-</u>

ಸರ್ಕಾರಿ ಹಾಗೂ ಅಂಗೀಕೃತ ಕೈಗಾರಿಕಾ ಸಂಸ್ಥೆಗಳಲ್ಲಿ & ಪಾಲಿಟೆಕ್ನಿಕ್ ಗಳಲ್ಲಿ ಎಸ್.ಎಸ್.ಎಲ್.ಸಿ. ನಂತರ ವ್ಯಾಸಂಗ ಮಾಡುತ್ತಿರುವ ಐ.ಟಿ.ಐ. & ಡಿಪ್ಲಮೋ ತರಗತಿಗಳಲ್ಲಿ ತರಬೇತಿ ಪಡೆಯುತ್ತಿರುವ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 150-00 ರಂತೆ 10 ತಿಂಗಳಿಗೆ ಸ್ಟೈಫಂಡ್ ನೀಡಲಾಗುವುದು. 2006-07 ನೇ ಸಾಲಿಗೆ ರೂ. 0.11 ಲಕ್ಷಗಳ ಅನುದಾನ ಒದಗಿಸಿದ್ದು ಅನುದಾನ ಖರ್ಚು ಭರಿಸಲು ಕ್ರಮ ವಹಿಸಿದೆ.

6. <u>2225-03-277-2-52 :- ಶುಲ್ಕ ವಿನಾಯಿತಿ :- ರೂ. 46.91ಲಕ್ಷ</u>

ಮೈಸೂರು ಜಿಲ್ಲೆಯ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ, ಭೋದನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಇತ್ಯಾದಿಗಳನ್ನು ಮಂಜೂರು ಮಾಡಲು ಮತ್ತು ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ ಪಡೆಯುತ್ತಿರುವವರಿಗೆ ಶಿಷ್ಯವೇತನ ಪಾವತಿಸಲು 2006-07 ನೇ ಸಾಲಿಗೆ ರೂ. 46.91 ಲಕ್ಷಗಳ ಅನುದಾನ ವನ್ನು ಒದಗಿಸಿದ್ದು ಫೆಬ್ರವರಿ 15 ರ ಅಂತ್ಯಕ್ಕೆ ರೂ. 15.64 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 15.523 ಲಕ್ಷಗಳ ಅನುದಾನ ಖರ್ಚು ಭರಿಸಲಾಗಿದೆ. ಹಾಗೂ ಬಾಕಿಯಿರುವ ಶುಲ್ಕವಿನಯಾತಿ ಬಿಲ್ಲುಗಳನ್ನು ಪಾವತಿಸಲು ರೂ. 69.91 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 69.782 ಲಕ್ಷಗಳ ಅನುದಾನವನ್ನು ಖರ್ಚು ಭರಿಸಿದೆ.

7. <u>2225-03-277-2-71 ಮೆಟ್ರಿಕ್ ಪೂರ್ವ/ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆ :-</u>
<u>ವೇತನ ರೂ. 154.26 ಲಕ್ಷ ವೇತನೇತರ ರೂ 162.92 ಲಕ್ಷ ಒಟ್ಟು ರೂ. 317.18 ಲಕ್ಷ</u>

ಈ ಕಾರ್ಯ ಕ್ರಮದಡಿ 44 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು, 11 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು , 3 ಖಾಸಗಿ ವಿದ್ಯಾರ್ಥಿ ನಿಲಯಗಳು ಕಾರ್ಯ ನಿರ್ವಹಿಸುತ್ತಿವೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ 2277 ವಿದ್ಯಾರ್ಥಿಗಳು, ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ 800 ವಿದ್ಯಾರ್ಥಿಗಳು, 3 ಖಾಸಗಿ ವಿದ್ಯಾರ್ಥಿ ನಿಲಯಗಳಲ್ಲಿ 260 ವಿದ್ಯಾರ್ಥಿಗಳ ಸಂಖ್ಯಾಬಲ ಹೊಂದಿರುತ್ತದೆ. ಇಲಾಖಾ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ರೂ. 450-00 ರಂತೆ, ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ರೂ. 500-00 ರಂತೆ 10 ತಿಂಗಳಿಗೆ ಭೋಜನಾ ವೆಚ್ಚಕ್ಕಾಗಿ ಮತ್ತು ಇತರೆ ಉಚಿತ ಸೌಲಭ್ಯಗಳನ್ನು ನೀಡಲು ಮತ್ತು 218 ಸಿಬ್ಬಂದಿಯವರ ವೇತನ ಪಾವತಿಸಲು 2006-07 ನೇ ಸಾಲಿಗೆ ವೇತನಕ್ಕಾಗಿ ರೂ. 154.26 ಲಕ್ಷಗಳನ್ನು ಹಾಗೂ ವೇತನೇತರಕ್ಕಾಗಿ ರೂ 162.92 ಲಕ್ಷಗಳನ್ನು ಒಟ್ಟು ರೂ 317.18 ಲಕ್ಷಗಳ ಅನುದಾನವನ್ನು ಒದಗಿಸಿದ್ದು 2006-07 ನೇ ಸಾಲಿನ ಫೆಬ್ರವರಿ 15 ರ ಅಂತ್ಯಕ್ಕೆ ವೇತನಕ್ಕಾಗಿ ರೂ. 154.26ಲಕ್ಷ ಹಾಗ

ೂ ವೇತನೇತರಕ್ಕಾಗಿ ರೂ. 162.92 ಲಕ್ಷ ಒಟ್ಟು 317.18 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ವೇತನಕ್ಕೆ 137.58 ಲಕ್ಷ ಹಾಗೂ ವೇತನೇತರಕ್ಕೆ ರೂ. 120.723 ಲಕ್ಷ ಒಟ್ಟು ರೂ. 258.303 ಲಕ್ಷಗಳ ಅನುದಾನವನ್ನು ಖರ್ಚು ಭರಿಸಿದೆ.

8. <u>2225-03-277-2-84 ಅಲ್ಪ ಸಂಖ್ಯಾತರ ಅನಾಥಾಲುಗಳಿಗೆ ಸಹಾಯಧನ :- ರೂ. 4.33 ಲಕ್ಷ</u>

ಮೈಸೂರು ಜಿಲ್ಲೆಯಲ್ಲಿ 3 ಖಾಸಗಿ ಅನಾಥಾಲಯಗಳು ಕಾರ್ಯ ನಿರ್ವಹಿಸುತ್ತಿದ್ದು ಇವುಗಳ ಮಂಜೂರಾತಿ ಸಂಖ್ಯೆ 309 ಆಗಿರುತ್ತದೆ. ಈ ವಿದ್ಯಾರ್ಥಿಗಳಿಗೆ ಪ್ರತಿ ಮಾಹೆಯಾನ ರೂ. 150.00 ರಂತೆ 12 ತಿಂಗಳಿಗೆ ಭೋಜನಾ ವೆಚ್ಚ ಮಂಜೂರು ಮಾಡಲು 2006-07 ನೇ ಸಾಲಿಗೆ ರೂ. 4.33 ಲಕ್ಷಗಳ ಅನುದಾನವನ್ನು ಒದಗಿಸಿದ್ದು ಫೆಬ್ರವರಿ 15 ರ ಅಂತ್ಯಕ್ಕೆ ರೂ. 4.33 ಲಕ್ಷ ಅನುದಾನ ಬಿಡುಗಡೆಯಾಗಿದ್ದು ರೂ. 3.554 ಲಕ್ಷಗಳ ಅನುದಾನವನ್ನು ಖರ್ಚು ಭರಿಸಿದೆ.

9. <u>2225-03-800-0-51 :- ದಿ. ಡಿ.ದೇವರಾಜ ಅರಸ್ ರವರ ಹುಟ್ಟು ಹಬ್ಬ ಆಚರಣೆ ಮತ್ತು 15 ಅಂಶಗಳ ಮೇಲೆ ವಿಚಾರ ಗೋಷ್ಟಿ :- ರೂ. 0.11 ಲಕ್ಷ</u>

. ಡಿ.ದೇವರಾಜ ಅರಸ್ ರವರ ಹುಟ್ಟು ಹಬ್ಬ ಆಚರಣೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ದಿನವನ್ನು ಆಚರಿಸಲು 2006-07 ನೇ ಸಾಲಿಗೆ ರೂ. 0.11 ಲಕ್ಷಗಳ ಅನುದಾನವನ್ನು ಒದಗಿಸಿದ್ದು ಸದರಿ ಅನುದಾನವನ್ನು ಖರ್ಚು ಭರಿಸಲು ಕ್ರಮ ವಹಿಸಿದೆ..

## <u>ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು</u>

1. <u>2225-03-001-0-01 ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳ ವೇತನ :- ರೂ. 9.11 ಲಕ್ಷ</u>

ಈ ಕಾರ್ಯಕ್ರಮದಡಿ ತಾಲ್ಲೂಕು ಮಟ್ಟದಲ್ಲಿ ವಿದ್ಯಾರ್ಥಿ ನಿಲಯಗಳು, ಆಶ್ರಮ ಶಾಲೆಗಳ ನಿರ್ವಹಣೆ, ಶಾಲಾ ಕಾಲೇಜು ಗಳಿಗೆ ಭೇಟಿ ನೀಡಿ ತಪಾಸಣೆ ಇತ್ಯಾದಿಗಳ ಕರ್ತವ್ಯ ನಿರ್ವಹಣೆ ಮಾಡಲು ತಾಲ್ಲೂಕು ಮಟ್ಟದಲ್ಲಿ ಇಲಾಖೆಯ ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು ರವರು ಇರುತ್ತಾರೆ. ಮೈಸೂರು ಜಿಲ್ಲೆಯ 7 ತಾಲ್ಲೂಕುಗಳಲ್ಲಿ ಒಂದು ತಾಲ್ಲೂಕಿನ ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳ ವೇತನ ಯೋಜನೆಯಡಿಯಲ್ಲಿ ಡ್ರಾ ಮಾಡಲಾಗುತ್ತಿದೆ. ಉಳಿದ 6 ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳ ವೇತನ, ಪ್ರವಾಸ ಭತ್ಯೆ, ಸ್ಟೇಷನರಿ ಖರೀದಿ ಇತ್ಯಾದಿಗಳಿಗೆ 2006-07 ನೇ ಸಾಲಿಗೆ ರೂ.9.11 ಲಕ್ಷಗಳ ಅನುದಾನ ಒದಗಿಸಿದ್ದು, ಫೆಬ್ರವರಿ 15 ರ ಅಂತ್ಯಕ್ಕೆ ರೂ. 9.11 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 8.126 ಲಕ್ಷಗಳ ಅನುದಾನ ಖರ್ಚು ಭರಿಸಿದೆ..

2. <u>2225-03-102-1-74 ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ ಮತ್ತು ಹೊಸ ಕೇಂದ್ರಗಳ ಪ್ರಾರಂಭ :- ರೂ. 2.88 ಲಕ್ಷ</u>

ಮೈಸೂರು ಜಿಲ್ಲೆಯಲ್ಲಿ 2 ಹೊಲಿಗೆ ತರಬೇತಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು 40 ಫಲಾನುಭವಿಗಳು ತರಬೇತಿಯನ್ನು ಪಡೆಯುತ್ತಿದ್ದಾರೆ. ಇವರುಗಳಿಗೆ ಮಾಹೆಯಾನ ರೂ. 300-00 ರಂತೆ ಶಿಷ್ಯವೇತನ ಪಾವತಿಸಲು, ಕಚ್ಚಾ ಸಾಮಗ್ರಿಗಳನ್ನು ಖರೀದಿಸಲು ಮತ್ತು ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣ ರಾದವರಿಗೆ ಉಚಿತ ಹೊಲಿಗೆ ಯಂತ್ರಗಳನ್ನು ನೀಡಲು 2006-07 ನೇ ಸಾಲಿಗೆ ರೂ.2.88 ಲಕ್ಷಗಳ ಅನುದಾನ ಒದಗಿಸಿದ್ದು ಫೆಬ್ರವರಿ 15 ರ ಅಂತ್ಯಕ್ಕೆ ರೂ. 2.88 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 1.591 ಲಕ್ಷ ಗಳ ಅನುದಾನ ಖರ್ಚು ಭರಿಸಿದೆ.

3. <u>2225-03-277-2-53 ವರ್ಗ 1 ರ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನಾ ವೆಚ್ಚ ಕಾರ್ಯಕ್ರಮ ರೂ. 3.36 ಲಕ್ಷ</u>

ಜಿಲ್ಲೆಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವರ್ಗ 1 ರ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 200.00 ರಂತೆ 10 ತಿಂಗಳಿಗೆ ಹೆಚ್ಚುವರಿ ಭೋಜನಾ ವೆಚ್ಚ ಸಂದಾಯ ಮಂಜೂರು ಮಾಡಲು 2006-07 ನೇ ಸಾಲಿಗೆ ರೂ. 3..36 ಲಕ್ಷಗಳ ಅನುದಾನ ಒದಗಿಸಿದ್ದು ಫೆಬ್ರವರಿ 15 ರ ಅಂತ್ಯಕ್ಕೆ ರೂ. 3.36 ಲಕ್ಷಗಳ ಅ ನುದಾನ ಬಿಡುಗಡೆಯಾಗಿದ್ದು ರೂ. 0.128 ಲಕ್ಷಗಳ ಅನುದಾನ ಖರ್ಚು ಭರಿಸಿ ಉಳಿದ ಅನುದಾನವನ್ನು ಖರ್ಚು ಭರಿಸಿಲು ಕ್ರಮ ವಹಿಸಿದೆ.

15. <u>2225-03-277-2-73 ಮೆಟ್ರಿಕ್ ಪೂರ್ವ /ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ :- ರೂ. 18.52 ಲಕ್ಷ</u>

ಮೈಸೂರು ಜಿಲ್ಲೆಯಲ್ಲಿ 5 ನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರಿಗೆ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗುವುದು.

| | | |
|---|---|---|
| 1. 5 ರಿಂದ 7 ತರಗತಿಯ ವಿದ್ಯಾರ್ಥಿಗಳಿಗೆ | ವಾರ್ಷಿಕ | ರೂ. 75.00 |
| 2. 8 ರಿಂದ 10 ನೇ ತರಗತಿಯ ವಿದ್ಯಾರ್ಥಿಗಳಿಗೆ | ವಾರ್ಷಿಕ | ರೂ. 100.00 |
| 16. P.U.C.,T.C.H., B.A.,B.Com.,B.B.M.,B.Sc., I.T.I ವಿದ್ಯಾರ್ಥಿಗಳಿಗೆ | ವಾರ್ಷಿಕ | ರೂ. 300.00 |
| 17. M.A.M.Sc., M.Com.,M.B.A., M.Ed.,B.Ed. L.L.B L.. L.M. ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ | ವಾರ್ಷಿಕ | ರೂ. 400.00 |
| 5. B.E., M.B.B.S., ಕೋಸ್ ್ಗಳ ವಿದ್ಯಾರ್ಥಿ ಗಳಿಗೆ | ವಾರ್ಷಿಕ | ರೂ. 500.00 |

2006-07 ನೇ ಸಾಲಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಲು ರೂ. 18.52 ಲಕ್ಷಗಳ ಅನುದಾನ ಒದಗಿಸಿದ್ದು ಫೆಬ್ರವರಿ 15 ರ ಅಂತ್ಯಕ್ಕೆ ರೂ. 18.52 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 8.457 ಲಕ್ಷಗಳ ಅನುದಾನವನ್ನು ಖರ್ಚು ಭರಿಸಲಾಗಿದೆ.

<u>5.. 2225-03-277-2-82 :- ಅನಾಥಾಲಯಗಳಿಗೆ ಸಹಾಯಧನ :- ರೂ. 5.89 ಲಕ್ಷ</u>

ಈ ಕಾರ್ಯಕ್ರಮದಡಿ 4 ಅನಾಥಾಲಯಗಳು ಕಾರ್ಯನಿರ್ವಹಿಸುತ್ತಿದ್ದು ಇವುಗಳ ಮಂಜೂರಾತಿ ಸಂಖ್ಯೆ 327 ಆಗಿರುತ್ತದೆ. ಇವರಿಗೆ ಮಾಹೆಯಾನ ರೂ. 150.00 ರಂತೆ 10 ತಿಂಗಳಿಗೆ ಭೋಜನಾ ವೆಚ್ಚ ಮಂಜೂರು ಮಾಡಲು 2006-07 ನೇ ಸಾಲಿಗೆ ರೂ. 5.89 ಲಕ್ಷಗಳ ಅನುದಾನ ಒದಗಿಸಿದ್ದು ಫೆಬ್ರವರಿ 15 ರ ಅಂತ್ಯಕ್ಕೆ ರೂ. 5.89 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ. 1.716 ಲಕ್ಷಗಳ ಅನುದಾನ ಖರ್ಚು ಭರಿಸಲಾಗಿದೆ.

<u>6. 2225-03-277-2-88 ವಿದ್ಯಾರ್ಥಿ ನಿಲಯಗಳ ಸುಧಾರಣೆ :- ರೂ. 0.90 ಲಕ್ಷ</u>

ಮೈಸೂರು ಜಿಲ್ಲೆಯಲ್ಲಿ 47 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು, 15 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು, 4 ಆಶ್ರಮ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು ಒಟ್ಟು 3557 ವಿದ್ಯಾರ್ಥಿಗಳು ಉಚಿತ ಊಟ, ವಸತಿ ಮತ್ತು ಇತರೆ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಈ ವಿದ್ಯಾರ್ಥಿಗಳಿಗೆ ಅವಶ್ಯಕವಾಗಿ ಬೇಕಾದ ಮೂಲಭೂತ ಸೌಕರ್ಯಗಳಾದ ಹಾಸಿಗೆ ಹೊದಿಕೆ, ಗ್ರಂಥಾಲಯ ಪುಸ್ತಕ, ಪಾತ್ರೆಗಳು,ಆಟದ ಸಾಮಗ್ರಿಗಳು ಇತ್ಯಾಧಿಗಳನ್ನು ಖರೀದಿಸಲು ರೂ. 0.90 ಲಕ್ಷಗಳ ಅನುದಾನ ಒದಗಿಸಿದ್ದು ಫೆಬ್ರವರಿ 15 ರ ಅಂತ್ಯಕ್ಕೆ ರೂ. 0.90 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ.0.595 ಲಕ್ಷಗಳ ಅನುದಾನ ಖರ್ಚು ಭರಿಸಲಾಗಿದೆ.